# ನಂಬಿಕೆಯ ನೂಲು

# ಮಾಯಕ್ಕ ದೇವಣ್ಣ ಮದುವೆ ಪ್ರಸಂಗ

■ ಬಸು ಬೇವಿನಗಿಡದ
ಕಲೆ: ಎಚ್.ಎಸ್. ಮೋನಪ್ಪ



**ಅವನೊಂದಿಗೆ** ಜಗಳ ಮಾಡುವಂತಿಲ್ಲ. ಎಲ್ಲ ವ್ಯವಹಾರಗಳು ಅವನನ್ನೇ ಅವಲಂಬಿಸಿವೆ. ಆದರೆ ಅವನ ಬಗ್ಗೆ ಕೆಟ್ಟದಾಗಿ ಮಾತಾಡುವುದು ಸಹ ತಪ್ಪೇನೊ? ಅವನು ಇರದಿದ್ದರೆ ತಾನು ಖಂಡಿತ ಜೈಲು ಪಾಲಾಗುತ್ತಿದ್ದೆ. ಕಂಡಕ್ಟರನ ಸಾವಿನಲ್ಲಿ ತಾನು ಆರೋಪಿಯೆಂದು ಇನ್ನೇನು ಸಾಬೀತಾಗುವುದಿತ್ತು. ಕಾಕಾ ಇದ್ದಿದ್ದಕ್ಕೆ ಪಾರಾದೆ. ಅನಸೂಯೆಯೂ ಪಾರಾದಳು. ಕುಣಿಕೆಯಿಂದ ತಪ್ಪಿಸಿಕೊಳ್ಳಲು ದುಡ್ಡು ಹೋಯಿತು. ಒಂದು ಎಕರೆ ಹೊಲ ಮಾರದೆ ಗತ್ಯಂತರವಿರಲಿಲ್ಲ. ಕಷ್ಟಕಾಲದಲ್ಲಿ ಕುತ್ತಿಗೆ ಕೊಯ್ಯುವವರೆ ಅಧಿಕ. ಜಮೀನು ಮಾರುವುದಿದೆಯೆಂದಾಗ ಅಗಡಾದಿಗಡಿ ಬೆಲೆಗೆ ಕೇಳಿದವರೆ ಹೆಚ್ಚು. ಕೊನೆಗೆ ಹೊಲ ಕೊಳ್ಳಲು ಕಾಕಾನನ್ನು ತಾನೆ ಒಪ್ಪಿಸಿದೆ. ತನ್ನ ಹೊಲ ಆತ ಖರೀದಿ ಮಾಡಿದ್ದರಿಂದ ಅವನ ಜಮೀನಿನ ದಾರಿ ಮತ್ತಷ್ಟು ಅಗಲವಾಯಿತು, ಹತ್ತಿರವಾಯಿತು. ಅವನು ಹೇಳಿದಂತೆ ಕೇಳಿದಾಗ ತನಗೆ ಒಳ್ಳೆಯದೇ ಆಗಿದೆ. ವೃಥಾ ಅವನನ್ನೇಕೆ ಶಪಿಸಬೇಕು?

ಮಗನಿಗೆ ಇನ್ನೊಂದು ಮದುವೆ ಮಾಡಬೇಕೆಂದು ಅವನಲ್ಲಿ ಅವ್ವ ಗೋಗರೆದಿದ್ದಾಳೆ. ಆ ಮಾತು ಕೇಳಿ ಅವನು ದೊಡ್ಡದಾಗಿ ನಕ್ಕನಂತೆ. ‘ಅನಸವ್ವನ್ನ ಕರಕೊಂಡು ಬಂದ್ರಾತು’ ಅಂದನಂತೆ. ‘ತಮ್ಮಾ ದುಂಡಣ್ಣ, ಆಕೀ ಮಾತ್ರ ಮರೇಬ್ಯಾಡ. ಅಂವಂದು ಮದ್ವಿಯಾಗಲಿಲ್ಲಂದ್ರೂ ಸರಿ.’ ಅವ್ವನ ಮಾತಿಗೆ ಆತ ಏನೂ ಹೇಳಲಿಲ್ಲ. ಅವ್ವ ಹೇಳುವಂತೆ ತನಗೆ ಬಹಳ ವಯಸ್ಸೇನೂ ಆಗಿಲ್ಲ. ಒಂದು ವರ್ಷ ಕಾಲ ಹೊಂಗಲದಲ್ಲಿ ಬೇರೆಯವರ ಹೊಟೇಲದಲ್ಲಿ ತನ್ನ ಸ್ವಂತಿಕೆಯನ್ನೆ ತಾನು ಮರೆತುಬಿಟ್ಟಿದ್ದೆ. ಅವರು ಉಪ್ಪಿಟ್ಟು ಮಾಡೆಂದರೆ ಉಪ್ಪಿಟ್ಟು ಮಾಡುವುದು, ಪೂರಿ ಎಂದರೆ ಪೂರಿ, ಮಿರ್ಚಿ ಭಜಿ ಎಂದರೆ ಮಿರ್ಚಿ ಭಜಿ. ಎಲ್ಲರೂ ಶಹಬ್ಬಾಸ ಎನ್ನುವವರೇ. ತಾನು ಆ ಹೊಟೇಲಿಗೆ ಹೋದುದಕ್ಕೆ ಮಾಲೀಕರಿಗೆ ಬಹಳ ಸಂತೋಷವಾಗಿತ್ತು. ಆದರೆ ತಾನು ಮಾತ್ರ ಹಸಿವಿಲ್ಲದಿದ್ದರೂ ಉಣ್ಣುತ್ತಿದ್ದೆ. ಮಲಗಿದರೂ ನಿದ್ದೆ ಬರುತ್ತಿರಲಿಲ್ಲ. ಕಾಕಾನೆ ಒಂದೆರಡು ಸಲ ಕೇಳಿದ್ದ. ‘ಆರಾಮ ಅದಿಯಿಲ್ಲೋ, ತೋರಿಸಿಕೊ.’ ಒಂದು ರೀತಿಯಲ್ಲಿ ತನಗೆ ಕಿಲುಬು ಹತ್ತತೊಡಗಿತ್ತು. ಅದನ್ನು ಕೊಡವಿಕೊಂಡು ಬಂದಿದ್ದೇನೆ. ನಿರುತ್ಸಾಹವನ್ನು ಹತ್ತಿರ ಸುಳಿಯಗೊಡಬಾರದು. ಮತ್ತೆ ಮೊದಲಿನಂತೆ ಓಡಾಡಬೇಕು. ದುಡಿಯಬೇಕು. ತನ್ನ ಹೊಟೇಲು ಮತ್ತೆ ಹೆಸರಾಗಬೇಕು. ತನ್ನ ತಾಯಿಗೆ ಎಷ್ಟೊಂದು ಉತ್ಸಾಹವಿದೆ. ತನಗೇಕಿಲ್ಲ? ಮೊಣಕಾಲಿನ ಕೀಲು ಕಿರ್ ಕಿರ್ ಎನ್ನುತ್ತಿದ್ದರೂ ಅವ್ವ ದುಡಿಯುತ್ತಲೆ ಇರುತ್ತಾಳೆ. ಕಿಲುಬುಗಟ್ಟಿದ್ದನ್ನು ತಿಕ್ಕಿ ತಿಕ್ಕಿ ತೊಳೆಯುತ್ತಾಳೆ. ಸುಸ್ತಾಗಿ ನರಳಿದರೂ ನಂತರ ಗೆಲುವಾಗುತ್ತಾಳೆ. ಜೀವನದ ಬಗ್ಗೆ ಒಮ್ಮೆಯೂ ವಿಷಾದ ವ್ಯಕ್ತಪಡಿಸಿಲ್ಲ. ತಾನೇಕೆ ಮನಸ್ಸು ಕಹಿ ಮಾಡಿಕೊಳ್ಳಬೇಕು?

***

ಆರು ತಿಂಗಳ ನಂತರ ಶಿವವ್ವ ಮರಳಿ ಊರಿಗೆ ಹೊರಟಿದ್ದಾಳೆ. ಆಕೆಯನ್ನು ಕಳಿಸಿಕೊಡಲು ಊರಿಗೆ ಊರೇ ನೆರೆದಿದೆ. ಆಕೆಗೂ ಬಿಟ್ಟು ಹೋಗಲು ಮನಸ್ಸಿಲ್ಲ. ಆದರೆ ಊರಲ್ಲಿ ಇವಳಿಲ್ಲದೆ ಮನೆ ನಡೆಯಲಾರದೆಂದು ಕಿರಿಯ ಮಗ ಸಿಂದೋಗಿಯಿಂದ ಕರೆಯಲು ಬಂದಿದ್ದಾನೆ. ಮೂರು ತಿಂಗಳ ಹಿಂದೊಮ್ಮೆ ಬಂದಿದ್ದ. ‘ಎಂಟು ದಿನಾ ಬಿಟ್ಟ ಬರ್ತೇನಿ. ನೀನೇನು ಹೊಳ್ಳಿ ಕರೀಲಿಕ್ಕೆ ಬರಬ್ಯಾಡ. ಬಸ್ಸಿಗೆ ಕುಂದ್ರಸತಾರು. ನಾ ಬರ್ತೇನಿ. ಹೋಗು.’ ಮಗನಿಗೆ ಹೇಳಿ ಕಳಿಸಿದ್ದಳು.

ಮತ್ತೆ ಮೂರು ತಿಂಗಳು ಕಳೆದವು. ಅಷ್ಟಾದರೂ ಆಕೆ ಊರಿಗೆ ಹೋಗಲಿಲ್ಲ. ಆಕೆ ಹೋಗುತ್ತೇನೆಂದರೂ ದ್ಯಾವಣ್ಣ ‘ಅಲ್ಲೇರ ಹೋಗಿ ಏನ್ ಮಾಡ್ತಿ ತಗೋ. ನೀ ಇಲ್ಲ ಅಂದ್ರ ಗಿರಾಕಿಗಳನ್ನ ಸಂಭಾಳಿಸೋದು ಕಷ್ಟ ಅಕ್ಕೇತಿ.’ ಅವನು ಹೇಳಿದ.